This is baseless. My contention is this. This is an Act called Rent Control Act. Under it, the rent fixed by the Assessing Authority of the Municipality should not exceed the limit prescribed in the Rent Control Act. There is a clear Supreme Court decision on page 151, AIR 1962 on this matter In that case, for a particular premises. it was fixed at Rs. 1450/—. The tax was assessed by the Calcutta Corporation. He has filed a case in the High Court against the assessment made by the Corporation. The Court fixed the entire rental value as Rs. 681/- and the Corporation has filed an appeal in the Supreme Court. Ther is a clear decision of the Supreme Court that rental value of the premises cannot be fixed higher than the tax to be paid. The rent should be fixed according to Rent Control Act. The same position is with regard to Gulbarga. There is a building leased to a party by the landlord for a period of 10 years. He is getting the rent through cheque. In this case the assessing authority fixed the rental value more than what he is getting. It is clearly defined in the Karnataka Municipalities Act, 1964.....

ಅಧ್ಯಕ್ಷರು.— ನಾನು ಎನನ್ನು ಹೇಳುತ್ತಿದ್ದೇನೆಂದರೆ ನೀವು ಸಂಬಂಧಪಟ್ಟ ಮಂತ್ರಿಗಳ ಗಮನ ವನ್ನು ಸೆಳೆದಾಗ ಅವರು ಸ್ಟೇಟಮೆಂಟ್ ಮಾಡುತ್ತಾರೆ. ಆಮೇಲೆ ೧-೨ ವಿವರಣೆ ಕೇಳಬಹುದು. ಅದನ್ನೆಲ್ಲಾ ಓದಬೇಡಿ.

SRI QUMARUL ISLAM —Supposing if they go against law.

MR. SPEAKER.—Now the Member can ask only the clarification. He cannot read the Act and other details He has to follow the convention and nothing else.

SRI H.C. SRIKANTAIAH.—Sir, I request the hon Member to come to my chamber to discuss this matter. We have not done anything against law. Let us sit together and take a decision. I will call the Officers concerned and ask them to examine this.

(*ii*) *re : neglect of certain communities in the matter of employment and educational opportunities.*

SRI H. GANGADHARAN (Krishanaraja)—Mr. Speaker, Sir, I call the attention of the Minister for Law, Social Welfare and Backward Classes to the neglect certain communities in the matter of employment and educational opportunities.

SRI L. G. HAVANUR (Minister for Law, Social Welfare and Backward Classes)—Sir, I beg to make the following statement.

It is urged under the pretext of following the principles of Havanur's Commission Report, certain classes of persons are deprived of the jobs and admissions into various educational institutions. It alleged that they are neglected at present by the Officers of the

Department and looked upon with vegence and, at times, they are alleged to have been harassed which has caused fear in the minds of the younger generation.

2. In accordance with the Directive principles of State Policy contained in Article 46 of the Constitution of India, the State has to promote, with special care, the educational and economic interests of the weaker sections of the people and in particular, the Scheduled Castes and Scheduled Tribes and they shall be protected from social injustice in all forms of exploitation. In accordance with these principles laid down by the Constitution, the State Government constituted a Backward Clasess Commission under the Chairmanship of L. G. Havanur and referred to the Commission the terms of references which are as follows.—

(i) to suggest the criteria to be adopted for determining whether any classes of persons in the State other than the Schedule Castes and Scheduled Tribes may be treated as socially and educationally backward classes ;

(ii) to investigate into the living and working condition of all such classes of persons with special reference to the difficulties under which they may be labouring and to make recommendation as to the special provisions which are necessary to be made by the Government for their advancement and for the promotion of their social, educational and economic intersts generally :

(iii) to make a list of all classes which may be regarded as backward classes in the State :

(iv) to suggest what reservations should be made for such classes in the educational institutions maintained by the State or receiving aid out of the State funds ;

(v) to suggest what other concessions like scholarships etc, may be given to such classes by way of assistance :

(v) to determine to what extent such classes are represented in the services under the State and to recommend what reservations of post in such services may be made for them :

(vii) to generally advise the Government about the steps to be taken to ensure adequate safeguards for the backward classes of citizens in the State.

The s id Commission after studying the socio economic conditions of the communities in general and after hearing about 365 witnesses furnished valuable recommendations for considerations of Government.

Government after considering all the aspects of the recommendations, issued orders in G.O. No. SWL 12 TPS 77 dated 22nd February 1977 indicating classes of citizens as Backward Committees, Backward Castes and Backward Tribes who, in the opinion of the State Government, are to be given preference for purpose of Articles 15 (4) and 16 (4) of the Constitution and which duty was cast upon the State Government to do so. Accordingly, reservations have been made for weaker sections while at the same time leaving certain percentage of opportunities in favour of the advanced commuities which the Hon'ble Member has referred to in his Calling Attention Notice. According to the said G.O. the following is the percentage of reservations made for purposes of Articles 15 (4) 16 (4) of the Constitution. The State Government have also created a Special Group of Citizens who do not come under Backward Communities, Backward Castes or Backward Tribes which deserves consideration at the hands of the State Government.

Reservation—

(i)	Backward Communities	...	20 percent
(ii)	Backward Castes	...	10 ,,
(iii)	Backward Tribes	...	5 ,,
(iv)	Special Group	...	5 ,,
(v)	Scheduled Castes and Scheduled Tribes	...	18 ,,
(vi)	Advanced Communities (General merit)	...	42 ,,

4. As stated in the proceeding paragraphs, what the State Government have ordered and implemented is for securing social justice and economic equality to all sections of the society and nothing has been done to impair the legitmate rights of the advanced communities and there can be no cause for apprehension of any type in the minds of the younger generation as alleged.

SRI H. GANGADHARAN—Mr. Speaker, Sir, it the outset I wish to state that I am not against the reservations to so called Backward Classes, the Scheduled Caste and Scheduled Tribes. What I would like to ask the Hon. Minister is that he has taken shelter under the Constitution to classify this classes. I would ask a question whether the Commission or the Government has right in taking shelter under Article 14, 15 (4) and 16 (4) of the Constitution. Sir, Government is expected to obey the law : Government is expected to follow the Constitution and Government should respect the law. Under Article 15 (4) and 16 (4) the Government has no power, noa uthority to

appoint a Commission at all. When the Commission is appointed by the Government of India under Article 340 of the Constitution, the State Government can go into the matter and say which communities comes under the category of Backward Classes or Scheduled Castes or Backward Communities. Here the State Government has not understood the provisions of the Constitution properly or rather it has misinterpreted it. I would not like to go to the extent of saying that the State Government played a fraud on the Constitution because it is not a happy expression. So, the Government under Articles 15 (4) and 16 (4) of the Constitution is entitled to give facilities to the Backward Classes, Scheduled Tribes not defined by the State Government or.....

2-30 P.M.

MR. SPEAKER—The Hon. Member must restrict himself to the scope of Call Attention Notice.

SRI H. GANGADHARAN.—My allegation is that the Constitution has not been followed strictly. Under article 340 (2) the Commission appointed by the President to go into the facts submits a report so the President and the President shall cause a copy of the report so presented together with a memorandum to be laid before each House of Parliament. Then the Central Government recommends to the State Government as how to make proper arrangements to help the advancement of these classes. Fundmentally the appointment of the Commission by the Government of Karnataka ha s violated article 340 of the Constitution.

The second point on which I seek clarification is this. I want to know whether the purpose with which this Commission was constituted is a genuine purpose or not. Does the Government really want help the poor and Backward Communities ?

ಅಧ್ಯಕ್ಷರು.—ಈಗ ಎಲ್ಲ ಅಂಶಗಳನ್ನು ಸಹ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ನಾವು ಈಗ ವಿವರಣೆ ಮಾತ್ರ ಕೇಳಬೇಕು,

ಶ್ರೀ ಎಂ. ಸಿ. ಬಸಪ್ಪ.—ಇದನ್ನು ತಾವು ಎರಡೂವರೆ ಗಂಟೆಗಳ ಚರ್ಚೆಗೆ ಪರಿವರ್ತನೆ ಮಾಡಿದರೆ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಡಲು ಅವಕಾಶವಾಗುತ್ತದೆ :

ಶ್ರೀ ಎಚ್. ಗಂಗಾಧರನ್.—ಬಹಳ ಜನ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆಯಾಗಿದೆ. ಇದನ್ನು ಎರಡೂವರೆ ಗಂಟೆಗಳ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ತಮಗೆ ಬರೆದು ಕೇಳಿದ್ದೇನೆ. ಬಹಳ ದಿವಸಗಳ ನಂತರ ಇದು ಕಾಲ್-ಅಟೆಂಷನ್ ನೋಟೀಸ್ ರೂಪದಲ್ಲಿ ಬಂದಿದೆ. ೬೦ ಲಕ್ಷ ಜನರಿಗೆ ಆಗಿರುವ ಅನ್ಯಾಯವನ್ನು ಈ ಸದನದ ಗಮನಕ್ಕೆ ತರಬೇಕಾಗಿದೆ. ಇದು ಜಾತಿಯ ಪ್ರಶ್ನೆಯಲ್ಲ. ಹೊಟ್ಟೆಬಟ್ಟೆಯ ಪ್ರಶ್ನೆಯಾಗಿದೆ. ಬಡಜನರ ಮುಂದಿನ ಭವಿಷ್ಯದ ಪ್ರಶ್ನೆಯಾಗಿದೆ. ಒಬ್ಬ ಹೆಣ್ಣು ಮಗಳಿಗೆ ಅನ್ಯಾಯ ಆದ ಬಗ್ಗೆ ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಲಾಯಿತು, ಆದರೆ ೬೦ ಲಕ್ಷ ಜನರಿಗೆ ಆಗಿರುವ ಅನ್ಯಾಯದ ಬಗ್ಗೆ ಇಲ್ಲಿ ಚರ್ಚೆ ಮಾಡಲು ಅವಕಾಶವಿಲ್ಲದಿದ್ದರೆ ಹೇಗೆ ?

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್:—ನನ್ನದೊಂದು ಕ್ರಿಯಾಲೋಪ ಇದೆ, ಏನೆಂದರೆ ಕಾಲಿಂಗ್-ಅಟೆಂಷನ್ ನೋಟೀಸ್ ಮೇಲೆ ಭಾಷಣ ಮಾಡಲು ಇಲ್ಲಿ ಅವಕಾಶವಿದೆಯೇ ಎಂಬುದನ್ನು ತಾವು ತಿಳಿಸಬೇಕು ?

ಅಧ್ಯಕ್ಷರು.—ಅದನ್ನೇ ನಾನು ಹೇಳುತ್ತಿದ್ದೇನೆ. ಇದು ೫ ನಿಮಿಷಗಳಲ್ಲಿ ಮುಗಿಯಬೇಕು : ಇದರ ಮೇಲೆ ಚರ್ಚೆ ಮಾಡಲು ಅವಕಾಶವಿದೆಯೇ ಎಂಬ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರೇ ಹೇಳಲಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸದನದಲ್ಲಿ ಹಾವನೂರ್ ಕಮೀಷನ್ ವರದಿ ಬಗ್ಗೆ ಚರ್ಚೆಯಾಗಿಲ್ಲ. ಈ ವರದಿ ಮತ್ತು ಸರ್ಕಾರದ ಆಜ್ಞೆ ಏನಿದೆ. ಅದರ ಪರಿಣಾಮವಾಗಿ ಈ ರಾಜ್ಯದಲ್ಲಿರತಕ್ಕಂಥ ಕೆಲವು ಜನರ ಮೇಲೆ ತೀವ್ರ ರೂಪದಿಂದ ಪರಿಣಾಮವಾಗಿದೆ ಎಂಬ ಅಭಿಪ್ರಾಯವಿದೆ. ಕೆಲವರಿಗೆ ಒಳ್ಳೆಯದೂ ಆಗಿದೆ: ಒಟ್ಟಿನಲ್ಲಿ ಎರಡು ತರಹ ಅಭಿಪ್ರಾಯಗಳಿವೆ. ಹರಿಜನ ಗಿರಿಜನರಿಗೆ, ಅಲ್ಪಸಂಖ್ಯಾತರಿಗೆ, ಹಿಂದುಳಿದವರ್ಗದವರಿಗೆ ರಾಜ್ಯಾಂಗದಲ್ಲಿರತಕ್ಕಂಥ ಸೌಕರ್ಯಗಳನ್ನು ಕಲ್ಪಿಸಿಕೊಡುವುದು ಸರ್ಕಾರದ ಕರ್ತವ್ಯವಾಗಿದೆ. ಯಾವ ಸರ್ಕಾರವೇ ಇರಲಿ, ಅದನ್ನು ಮಾಡಬೇಕಾಗುತ್ತದೆ. ಅದಕ್ಕೆ ಸರ್ಕಾರ ಬದ್ಧವಾಗಿದೆ. ಅದರ ಜೊತೆಗೆ ಬೇರೆ ಸಮಾಜದವರಿಗೆ ಅನ್ಯಾಯವಾಗಿದೆ ಎನ್ನುವ ಧ್ವನಿಯಿದ್ದರೆ ಅದನ್ನು ಸಹ ಪರಿಶೀಲನೆ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ಈ ಹಾವನೂರ್ ಕಮಿಷನ್ ವರದಿ ಬಗ್ಗೆ ಇಲ್ಲಿ ಎರಡೂವರೆ ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ, ಅದು ಸಾಕಾಗುವುದಿಲ್ಲ. ಆದಕಾರಣ ಆದರ ಮೇಲೆ ಒಂದೆರಡು ದಿವಸಗಳ ಕಾಲವಾದರೂ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು. ಆಗ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಡಲು ಸಾಧ್ಯವಾಗುತ್ತದೆ. ಜೊತೆಗೆ ಅದರಲ್ಲಿ ಏನಾದರೂ ತಪ್ಪುಗಳಿದ್ದರೆ ಅದನ್ನು ತಿದ್ದಿಕೊಳ್ಳುವುದಕ್ಕೂ ಸಹ ಸರ್ಕಾರಕ್ಕೂ ಅವಕಾಶವಾಗುತ್ತದೆ. ಈ ವರದಿಯು ೭-೮ ವಾಲ್ಯೂಂಗಳಿಂದ ಕೂಡಿದೆ. ಆದಕಾರಣ ಅದನ್ನು ಅರ್ಧ ಗಂಟೆಯಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ಆ ವರದಿಯನ್ನು ತಯಾರು ಮಾಡುವ ಸಮಯದಲ್ಲಿ ಮಾನ್ಯ ಹಾವನೂರ್ ಅವರು ಗಡ್ಡವನ್ನು ಸಹ ಬಿಟ್ಟಿದ್ದರು. ಈಗ ಬೋಳಿಸಿದ್ದಾರೆ. ಇಂತಹ ವರದಿಯನ್ನು ಚರ್ಚೆ ಮಾಡಲು ಇಲ್ಲಿ ಸಂಪೂರ್ಣ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಈ ವಿಷಯವನ್ನು ಬಿಜಿನೆಸು ಅಡ್ವೈಜರಿ ಕಮಿಟಿಯಲ್ಲಿ ಪ್ರಸ್ತಾಪ ಮಾಡಿ. ಅಲ್ಲಿ ನಾವು ತೀರ್ಮಾನ ಕೈಕೊಳ್ಳುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಮಾನ್ಯ ಮಂತ್ರಿಗಳು ಸಂಪೂರ್ಣವಾದ ಉತ್ತರ ಕೊಡುವುದು ಕಷ್ಟ. ಏಕೆಂದರೆ ಸಮಯದ ಅಭಾವವಿದೆ. ಜೊತೆಗೆ ಇದರಲ್ಲಿ ಅನೇಕ ತೊಡಕಿನ ಪ್ರಶ್ನೆಗಳಿವೆ. ಒಟ್ಟಿನಲ್ಲಿ ಕಾಲಿಂಗ್ ಅಟೆನ್‌ಷನ್ ನೋಟೀಸ್ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅಷ್ಟೊಂದು ಅವಕಾಶ ವಿಲ್ಲವೆಂಬುದು ನನ್ನ ಅಭಿಪ್ರಾಯ.

SRI C. M. ARUMUGHAM.—I extend my support to the point raised by the Leader of the Opposition because the Havanur Commission was appointed by an executive order and the decision on the report is in the form of a Government Order. It is not placed before the House for discussion. In fact I have complained on the commission's recommendations. The definition of Scheduled Casts is nowhere stated in the Constitution. Who is Scheduled Caste and what is the definition of Scheduled Caste ? The Havanur Commission has included any number of castes including the Scheduled Castes, and there by the quota or reservation to be made to the section of the society has been diluted very much. You can see in the report so many communities. The list of Scheduled Castes communities was drawn under the Government of India Act 1935. I want to know how it had been enlarged

and new castes were included ? The Havanur Commission had no business to do so. Only castes and communities agreed dy the Parliment must be included and not others. Only such castes which were prevented temple entry...

MR. SPEAKER.—I am not allowing this matter to be discussed.

SRI C. M. ARUMUGHAM.—The point is this has come in the form of a Call Attention Notice. Somehow our friends have brought this and scope is very limited. We cannot elicit more information. Therefore, the Chair must enlarge the scope As has been rightly stated by Sri Bommai you can fix up a day or two to discuss the Havanur Commission Report. If you want you can allow even 2½ hours discussion so that we may be at least able to put forth limited points. This Report is important for discussion and I am told he has taken 25 years to collect information and when he became the Chairman he was able to draft the report. I am only submitting the importance of the report.

MR. SPEAKER —The Leader of the Opposition wants one or two days so that there may be discussion on the report. Then there is no scope for discussing the matter under Call Attention Notice. Now the Call Attention has been allowed and the statement is msde by the minister. One or two members may ask for clarification. If the Business Advisory Committee agrees tomorrow alone you can take up this, I have no objection.

ಶ್ರೀ ಎಚ್. ಗಂಗಾಧರನ್.—ಅಧ್ಯಕ್ಷರೆ, ನಾನು ಈ ಕಾಲಿಂಗ್ ಅಟೆನ್‌ಷನ್‌ನಲ್ಲಿ ಹೆಚ್ಚು ಮಾತನಾಡಲು ಸ್ಕೋಪ್ ಇಲ್ಲವೆಂದು ಅರಿತಿದ್ದೇನೆ. ಆದರೆ ಇದು ಒಬ್ಬರ ಪ್ರಶ್ನೆಯಲ್ಲ ಇದೀ ಸಮಾಜಕ್ಕೆ ಸಂಬಂಧ ಪಟ್ಟ ವಿಷಯವಾದ್ದರಿಂದ ಇಷ್ಟು ಮಾತನಾಡಲು ಪ್ರಯತ್ನಪಡುತ್ತಿದ್ದೇನೆ.

ಶ್ರೀ ಜೆ. ಎಚ್. ಪಟೀಲ್.—ಮಾನ್ಯ ಅಧ್ಯಕ್ಷರೆ, ರೂಲ್‌ಪ್ರಕಾರ ಸದಸ್ಯರು ಎಲ್ಲರೂ ಇಲ್ಲಿ ಪ್ರಶ್ನೆ ಕೇಳುವುದಕ್ಕೆ ಬರುವುದಿಲ್ಲ. ಇದರಲ್ಲಿ ಈ ಕಡೆಯಿಂದ ಕೆಲವರು ಇದನ್ನು ಜಡ್ಜ್ ಮಾಡಬೇಕೆಂದು ಹೇಳುವುದನ್ನು ತಾವು ಒಪ್ಪಬೇಕು ಇದಕ್ಕೆ ತಮ್ಮ ಸಮ್ಮತಿಬೇಕಾಗುತ್ತದೆ. ?

ಅಧ್ಯಕ್ಷರು.—ನಾನು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುವುದು ಇಷ್ಟೆ. ನಾನು ಯಾರನ್ನೂ ಮಾತನಾಡಬೇಡಿ ಎಂದು ಹೇಳುವುದಕ್ಕೆ ತಯಾರಿಲ್ಲ. ಆದರೆ ಕಾಲಿಂಗ್ ಅಟೆನ್‌ಷನ್ ಮೇಲೆ ಇಷ್ಟು ಚರ್ಚೆ ಮಾಡಲಿಕ್ಕೆ ಅವಕಾಶವಿಲ್ಲ. ಆದ್ದರಿಂದ ಇವತ್ತು ಬಿಸಿನೆಸ್ ಅಡ್ವೈಜರಿ ಕಮಿಟಿ ಇರುವುದರಿಂದ ಇದರ ಬಗ್ಗೆ ಸಮಯವಕಾಶವನ್ನು ಗೊತ್ತುಮಾಡುವ ಬಗ್ಗೆ ತೀರ್ಮಾನ ಮಾಡಬಹುದು ಎಂದು ಹೇಳುತ್ತಿದ್ದೇನೆ.

ಶ್ರೀ ಎಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೆ, ಇದನ್ನು ಪೂರ್ಣ ಅವಧಿ ಚರ್ಚೆ ಮಾಡಲಿಕ್ಕೆ ತಾವು ಮನಸಾರೆ ಒಪ್ಪಿರುವುದರಿಂದ ಇದರ ಮೇಲೆ ನಾನು ಪೆಚ್ಚು ಕೇಳುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ನಾನು ಒಪ್ಪಿಗೆ ಕೊಟ್ಟಿದ್ದೇನೆಂದು ಹೇಳಬೇಡಿ. ಆದರೆ ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬಹುದು ಎಂದು ಹೇಳಿದೆನಷ್ಟೆ. ಅದನ್ನು ತಾವು ಒಪ್ಪಿಗೆ ಕೊಟ್ಟಿದ್ದೇನೆಂದು ಹೇಳಬೇಡಿ.

ಶ್ರೀ ಎಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೆ, ಏನು ಕ್ಲಾಸಿಫಿಕೇಷನ್ ಮಾಡಿದ್ದಾರೆ ಇದರಿಂದ ನೌಕರಿಗೆ ಸೇರುವವರಿಂಗಿಂತಲೂ ಹೆಚ್ಚಾಗಿ ಇದರ ಅವಶ್ಯಕತೆ ವಿದ್ಯಾಭ್ಯಾಸ ಮಾಡುವವರಿಗೆ ಜಾಸ್ತಿಯಾಗಿದೆ. ಈ ವೇಶದಲ್ಲಿರತಕ್ಕಂಥ ಮಕ್ಕಳಿಗೆ ಸ್ಕಾಲರ್‌ಶಿಪ್‌ಗಳಿಗೆ ಸೇರಲು ಮೊದಲು ಅವಕಾಶ ಸಿಕ್ಕಬೇಕು. ಉದಾಹರ

ಣಿಗೆ ಪ್ರಾಥಮಿಕ ಶಾಲೆಗಳಲ್ಲಿ ಈ ಸಿದ್ಧಾಂತ ಇಟ್ಟುಕೊಂಡು ಸ್ಥಳಾವಕಾಶವಿಲ್ಲದೆ ಬಹಳ ಮಕ್ಕಳಿಗೆ ತೊಂದರೆಯಾಗುತ್ತಿದೆ, ಆದ್ದರಿಂದ ಈ ಒಂದು ಫಾರ್ಮುಲಾ ಅನುಸರಿಸಿಕೊಂಡು ಹೋದರೆ ಇದರಿಂದ ಬಹಳ ಜನರಿಗೆ ತೊಂದರೆಯಾಗುತ್ತಿದೆ. ಇನ್ನು ಇದನ್ನು ನೌಕರಿಗೆ ಸೇರುವವರಿಗೂ ಅನ್ವಯಿಸಬೇಕು ಎಂದರೆ ಇದು ಹೇಗೆ ಇದೆ ಎಂದರೆ ಹಿಂದೆ ನೀವು ಜಾಸ್ತಿ ಊಟ ಮಾಡಿದ್ದೀರಿ ಇನ್ನುಮೇಲೆ ನೀವು ಊಟಿ ಮಾಡಬಾರದು ಎಂದು ಹೇಳಿದ ಹಾಗೆ ಆಗುತ್ತದೆ. ಹಿಂದೆ ಯಾರು ಸರಿಯಾಗಿ ಊಟ ಮಾಡಿಲ್ಲ ಅವರು ಊಟ ಮಾಡಲಿ ಎನ್ನುವ ಪರಿಪಾಠವನ್ನು ಈ ಸಂದರ್ಭದಲ್ಲಿ ತಂದಿದ್ದಾರೆ. ಇದರಿಂದ ಮೂಲತಃ ತೊಂದರೆಯಾಗುವುದರಿಂದ ಇದಕ್ಕೆ ಸರಿಯಾದ ಕಾಲವನ್ನು ತಾವು ಒದಗಿಸಿಕೊಟ್ಟರೆ ಇದರ ಬಗ್ಗೆ ವಿಷಯವನ್ನು ಕೂಲಂಕುಷವಾಗಿ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಭೀಮಣ್ಣ ಖಂಡ್ರೆ,—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಎರಡೂವರೆ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ ವಾಸ್ತವಿಕವಾಗಿ ಮಾನ್ಯ ಗಂಗಾಧರನ್‌ರವರು ಹೇಳಿದ್ದಾರೆ. ಪೆಡ್ಡೂಲ್ಡ್ ಕ್ಯಾಸ್ಟ್ ಬಗ್ಗೆ ತಮಗೆ ಏನು ಇಚ್ಛೆ ಇದೆ ಅದೇ ಇಚ್ಛೆ ನಮಗೂ ಇದೆ. ಆದರೆ ರೂಲ್ ೩೩ ಹಾಗೂ ೧೧೪ರ ಕೆಳಗೆ ಈಗ ಕಮಿಷನ್ ಏನು ಮಾಡಿದೆ ಅದು ವಿರೋಧವಾಗುತ್ತದೆ. ಇದರ ಜೊತೆಗೆ ನಮ್ಮ ರಾಜ್ಯಸರ್ಕಾರಕ್ಕೆ ಈ ಕಮಿಷನ್ ತೀರ್ಮಾನವನ್ನು ಜಾರಿಗೆ ಏನು ತಂದಿದೆ ಇದಕ್ಕೆ ಅಧಿಕಾರವಿಲ್ಲವೆಂದು ಹೇಳುತ್ತೇನೆ,

ಶ್ರೀ ಎಸ್. ಎಂ. ಶೀರನಹಳ್ಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಭೀಮಣ್ಣ ಖಂಡ್ರೆಯವರು ಈಗ ಮಾತನಾಡಲಿಕ್ಕೆ ಯಾವರೀತಿ ಅವಕಾಶ ಕೊಡುತ್ತೀರಿ ? ಅವರ ಹೆಸರು ಇವತ್ತಿನ ಅಜೆಂಡಾದಲ್ಲಿ ಇಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಯಾರಿಗೆ ಆಗಲಿ ನಾವು ಅವಕಾಶ ಕೊಡಬೇಕಾದರೆ ನಾವು ಸ್ವಲ್ಪ ಪ್ರಜ್ಞೆ ಇಟ್ಟುಕೊಂಡು ಕೊಟ್ಟಿರುತ್ತೇವೆ. ಲಿಸ್ಟ್ ಆಫ್ ಬಿಸಿನೆಸ್‌ನಲ್ಲಿ ಇಲ್ಲದಿದ್ದರೆ ನಾನು ಏತಕ್ಕೆ ಕರೆಯುತ್ತಿದ್ದೆ ? ದಯಮಾಡಿ ತಾವು ತಿಳಿದುಕೊಳ್ಳಬೇಕು. ದಯಮಾಡಿ ಕುಳಿತುಕೊಳ್ಳಿ ನನಗೆ ಗೊತ್ತಿದೆ ಅವರು ಕೂಡ ಇದರಲ್ಲಿ ಸಹಿಮಾಡಿ ನೋಟೀಸ್ ಕೊಟ್ಟಿದ್ದರು.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಸಭಾಪತಿಗಳೇ, ಹಿಂದೆ ಕಾಕಾ ಕಲೇಲ್ಕರ್ ಅವರು ಏನು ಒಂದು ವರದಿ ಕೊಟ್ಟಿದ್ದರು: ಅದು ಕೂಡ ಬಂದಿತ್ತು. ಆದರೆ ಈಗ ಏನು ಹಾವನೂರ್ ರಿಪೋರ್ಟ್ ಬಂದಿದೆ, ಅದರಲ್ಲಿ ಪೇಜ್ ೮೨ ಕ್ಲಾಸ್ ೬ರಲ್ಲಿ ಇದು ಜಾತ್ಯಾತೀತ ರಾಷ್ಟ್ರ ಎಂದು ಹೇಳಿದ್ದಾರೆ. ಇದರ ಬಗ್ಗೆ ಸುಪ್ರೀಮ್ ಕೋರ್ಟು ಕೂಡಾ ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಅದನ್ನು ಇದರಲ್ಲಿ ವಿಚಾರಮಾಡಿಲ್ಲ. ಆದ್ದರಿಂದ ಈ ವರದಿಯನ್ನು ಜಾರಿಗೆ ಕೊಡುವುದಕ್ಕೆ ನಿಮಗೆ ಅಧಿಕಾರ ಬರುವುದಿಲ್ಲ ?

MR. SPEAKER.—Is the hon. member making a commentary or seeking a clarification ?

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೆ, ಇವರು ಏನು ರಿಪೋರ್ಟ್ ಕೊಟ್ಟಿದ್ದಾರೆ ಅದು ಜಾತ್ಯಾತೀತತೆಗೆ ವಿರುದ್ಧವಾಗುತ್ತದೆ, ಇವರು ಕೊಟ್ಟಿರತಕ್ಕ ರಿಪೋರ್ಟ್ ಸರಿಯಲ್ಲ.

(ರಿಪೋರ್ಟ್ ಪುಸ್ತಕದ ಹಾಳೆಗಳನ್ನು ಹರಿದು ಬೆಂಕಿ ಹಚ್ಚಲಿಕ್ಕೆ ಪ್ರಯತ್ನಿಸಿದರು. ನಂತರ ಗೀಚಿದ ಬೆಂಕಿಕಡ್ಡಿಯನ್ನು ಆರಿಸಿದರು.

(Many members stood up to speak)

SRI K. LAKSHAMAN.—The hon. member has misbehaved. Action should be taken against him.

MR. SPEAKER.—The hon. member must be ashamed of this type of behaviour.

SRI S. M. SHEERNALY CHANDRASEKHAR.—Sir. I would like to move a motion for the suspension of the hon. member for the rest of the session for his disorderly behaviour on the floor of the House. I

request the Chair to kindly concede to my point. Nowhere in the history of theLegislature. this type of behaviour was tolerated. I request the Chair to suspend him for the rest of the session.

SRI K. LAKSHMAN.—Sir, I second the motion.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ರಿಪೋರ್ಟಿನ್ನು ಹರಿಯತಕ್ಕದ್ದು.....

SRI M. MALLIKARJUNA KHARGE.—This is the first time that such a thing has happened. We are suffering from ages, but these people do not tolerate for a few days.

SRI H. GANGADHARAN.—We are supporting your cause; we are not coming in your way.

(Many members stood up to speak)

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ಪುಸ್ತಕ ಹರಿದಿದ್ದು, ಸುಟ್ಟು ಹಾಕಿದ್ದು ನೋಡಿದ್ದೇನೆ. ಆದರೆ ನಾನು ತಮ್ಮ ಆಪ್ಪಣೆ ಪಡೆದು ಮಾತ ನಾಡುವುದಕ್ಕೆ ಎದ್ದಾಗ ಈ ಕೂಗಾಟ ನಡೆದದ್ದು ನೋಡಿದ್ದೇನೆ. ಈ ಸಭೆಯಲ್ಲಿ ವಿರೋಧ ಪಕ್ಷದ ನಾಯಕನಾಗಿ ತಮ್ಮ ಆಪ್ಪಣೆ ಪಡೆದು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಈ ರೀತಿ ಮಾಡುವುದು ಈ ಸಭೆಗೆ ಗೌರವ ತರುತ್ತದೆಯೇ? ನಾನು ಏನು ಹೇಳುತ್ತೇನೆ ಎನ್ನುವ ವಿಚಾರವನ್ನು ತಿಳಿದುಕೊಂಡು ಮಾತನಾಡಬಹುದಿತ್ತು. ನಾನು ತಮ್ಮ ಆಪ್ಪಣೆ ಪೆಡೆದು ಮಾತನಾಡಲಿಕ್ಕೆ ಪ್ರಾರಂಭ ಮಾಡಿದ್ದೆ. ಇವೊತ್ತು ಶ್ರೀಮಾನ್ ಭೀಮಣ್ಣ ಖಂಡ್ರೆಯವರು ಪುಸ್ತಕವನ್ನು ಹರಿದಿದ್ದಾಗಲಿ, ಸುಟ್ಟದ್ದಾಗಲಿ, ಅದರ ಬಗ್ಗೆ ನಾನು ಸಮರ್ಥನೆ ಮಾಡುತ್ತಿಲ್ಲ. ಆದರೆ ಈ ಸಭೆಯಲ್ಲಿ ಅನೇಕ ಸಾರಿ ಇಂತಹ ಪ್ರಸಂಗ ನಡೆದಿದೆ. ಇದೇ ಮನೆಯಲ್ಲಿ ವಿರೋಧ ಪಕ್ಷದಲ್ಲಿದ್ದಂತಹ ದಿವಂಗತ ನಾಯಕ ಶ್ರೀ ಗೋಪಾಲಗೌಡರು ರಾಜ್ಯ ಪಾಲರ ಭಾಷಣವನ್ನು ಹರಿದು, ತುಳಿದು, ಒದ್ದಂಥ ಪ್ರಕರಣ ಇದೆ. ಗೋಪಾಲಗೌಡರು ಮಾಡಿದ ವಿಚಾರ ಏನು ಎಂದರೆ ಗೇಣಿದಾರರಿಗೆ ನ್ಯಾಯ ಸಿಕ್ಕಬೇಕು ಅದು ಸಿಕ್ಕುತ್ತಿಲ್ಲ. ಸಮಾಜದಲ್ಲಿ ಬಿದ್ದು ಹೋದಂತಹ ಜನರಿಗೆ ಸರಿಯಾದ ರೀತಿಯಲ್ಲಿ ಅನುಕೂಲ ಇಲ್ಲ ಎಂದು ಮಾಡಿದ್ದರು. ವೈಯಕ್ತಿಕವಾಗಿ ಗೌರ್ನರಗೆ ಅವಮಾನ ಮಾಡಬೇಕು ಎಂಬ ದೆಸೆಯಿಂದ ಅಲ್ಲ. ಮಾನ್ಯ ಭೀಮಣ್ಣ ಖಂಡ್ರೆಯವರು ಮಾಡಿದ್ದು ಸರಿಯಲ್ಲ ಎಂದು ನಾನು ಮೊದಲೇ ಹೇಳಿದ್ದೇನೆ. ಅದು ಆಗಬಾರದು. ವೈಯಕ್ತಿಕವಾಗಿ ಮಾನ್ಯ ಹಾವನೂರು ಅವರು ಉತ್ತಮ ಕೆಲಸ ಮಾಡಿದ್ದಾರೆ. ರಿಪೋರ್ಟ್ ಬಗ್ಗೆ ಭಿನ್ನಾಭಿಪ್ರಾಯವಿರ ಬಹುದು. ಅವರ ವಿರುದ್ಧ ಅಲ್ಲ. ಮಾನ್ಯ ಸದಸ್ಯರಿಗೆ ಏನು ಅನಿಸಿದೆ ಎಂದರೆ ಈ ರಿಪೋರ್ಟ್‌ನಿಂದ ಕೆಲವೊಂದು ಸಮಾಜಕ್ಕೆ ಬಹಳ ತೊಂದರೆಯಾಗಿದೆ ಎನ್ನುವ ಅತಿರೇಕ ಭಾವನೆಯಿಂದ, ಅದನ್ನು ಪ್ರದರ್ಶನ ಮಾಡುವ ದೃಷ್ಟಿಯಿಂದ ಮಾಡಿದ್ದಾರೆ. ಅದು ಸರಿಯಲ್ಲ. ಅವರ ಭಾವನೆ ಎಷ್ಟೇ ಇದ್ದರೂ ಚರ್ಚೆ ಮೂಲಕ ತಿಳಿಸಬಹುದಾಗಿತ್ತು. ಅವರ ತೀವ್ರತೆಯನ್ನು ಈ ರೀತಿ ವ್ಯಕ್ತ ಮಾಡಿದ್ದಾರೆ. ಇದರ ಬಗ್ಗೆ ಸಸ್ಪೆಂಡ್ ಮಾಡತಕ್ಕ ಒಂದು ಮಟ್ಟಕ್ಕೆ ಹೋಗುವುದಕ್ಕೆ ಮುಂಚೆ ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ಯಾವ ಉದ್ದೇಶದಿಂದ ಮಾಡಿದ್ದಾರೆ ಅದನ್ನು ಎಕ್ಸ್‌ಪ್ಲೈನ್ ಮಾಡಿ ಈ ಸಭೆಗೆ ಒಪ್ಪಿಗೆ ಆಗುವ ರೀತಿಯಲ್ಲಿ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI C. M. ARUMUGHAM.—Sir, I entirely agree with the hon. the Leader of the Opposition in asking Sri Bheemanna Khandre to explain how he was provoked. I for one would like to state categorically that the act of setting fire is totally wrong, and we must condemn it. Setting fire to a document means setting fire to this House. If this is allowed tomorrow some member might bring a bomb. What happens Is it fair on the part of any member to set fire to a document in this

House ? Any provokation must be enforced by agrument, but by any act. I have been seeing Sri Deve Gowda and Sri Bommai arguing even when there is provokation. Therefore, we must with one voice condemn the hon. member's action, attitude and bebaviour in setting fire to the document.

We must with one voice condemn the action of Sri Bhimanna Khandre in order that such behaviour and action on the floor of this House should be stopped once and for all.

3-00 P.M.

SRI B. V. KAKKILAYA.—I fully agree with the remarks of Sri C.M. Armugam.

MR. SPEAKER.—I would like to know the opinion of the Hon. Minister.

SRI K. BHASKER NAIDU.—The Hon. Leader of the Opposition must straightaway condemn the action of Sri Bhimanna Khandre. If we condemn his action vehemently, nobody would be dare enough to indulge in such things either this side or that side hereafter.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಧ್ಯಕ್ಷರೇ, ದುರ್ದೈವವಶಾತ್ ಈ ಘಟನೆ ನಡೆಯಂವಾಗ ನಾನು ಇಲ್ಲಿ ಇರಲಿಲ್ಲ. ಬಂದಮೇಲೆ ದುರ್ಘಟನೆ ಈ ಸಭೆಯಲ್ಲಿ ಏನು ನಡೆಯಿತು ಅದನ್ನು ಕೇಳಿ ಬಹಳ ವೇದನೆ ಯಾಯಿತು, ಏಕೆಂದರೆ, ಕಳೆದ ೧೬ ವರ್ಷಗಳಿಂದ ಈ ಸಭೆಯ ಅವಿರತಸದಸ್ಯರಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಮಾನ್ಯ ಬೊಮ್ಮಾಯಿಯವರು ಹೇಳಿದರು ದಿವಂಗತ ಗೋಪಾಲಗೌಡರು ರಾಜ್ಯಪಾಲರ ಭಾಷಣವನ್ನು ಹರಿದು ಕಾಲಡಿಯಲ್ಲಿ ಹಾಕಿ ತುಳಿದು ಹಾಕಿದರು ಎಂದು. ಆಗ್ಗೆ ನಾನು ಕೂಡ ಇದ್ದೆ. ಅವರು ಕಾಲಡಿಯಲ್ಲಿ ಹಾಕಿ ತುಳಿಯಲಿಲ್ಲ. ಮಾನ್ಯ ರಾಜ್ಯಪಾಲರ ಭಾಷಣವನ್ನು ಹರಿದು ಹಾಕಿದರು. ಈ ಘಟನೆ ಅಂಥಾದ್ದು ಅಲ್ಲ. ಅದಕ್ಕಿಂತಲ್ಲೂ ಮೀರಿದ ಈ ಮಾನ್ಯ ಸಭೆಯ ಘನತೆ ಗೌರಗಳಿಗೆ ಕುಂದುತರತಕ್ಕ ರೀತಿಯಲ್ಲಿ ಶ್ರೀಮಾನ್ ಭೀಮಣ್ಣ ಖಂಡ್ರೆಯವರು ನಡೆದುಕೊಂಡಿದ್ದಾರೆ. ಈ ಮಾತನ್ನು ಹೇಳುವಾಗ ಅತಿರೇಕದ ಮಟ್ಟಕ್ಕೆ ಹೋಗಿದೆ ಎಂತು ಹೇಳಿದರೆ ಅತಿಶಯೋಕ್ತಿ ಆಗಲಾರದು ಎಂದು ಈ ಸಂದರ್ಭದಲ್ಲಿ ಒತ್ತಿಹೇಳುತ್ತೇನೆ. ಮಾತ್ರವಲ್ಲದೆ ಇದು ಒಂದು ಪ್ರಿವಿಲೇಜ್ ಇಸ್ಯೂ ಕೂಡ ಆಗುತ್ತದೆ. ಹೊರಗಡೆಯವರು ಕೂಡ ಈ ವಿಷಯವನ್ನು ನೋಡುತ್ತಿದ್ದಾರೆ. ಈ ಮನೆಯನ್ನು ಹೀಗೆ ನಡೆಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಲಕ್ಷಾಂತರ ಜನರ ಪ್ರತಿನಿಧಿಗಳಾಗಿ ಇವರು ಏನು ಮಾಡುತ್ತಿದ್ದಾರೆಂದು ಇವತ್ತು ಜನ ಕಣ್ಣು ತೆರೆದು ನೋಡುತ್ತಿದ್ದಾರೆ. ಈ ಒಂದು ಘಟನೆ ಹಾಗ ಬಾರದು. ಇದು ಖಂಡಿಮ್ ಮಾತ್ರವಲ್ಲದೆ. ಪ್ರಿವಿಲೇಜ್ ಇಸ್ಯೂ ಕೂಡ ಆಗುತ್ತದೆ. ಇಂಥ ದುರ್ಘಟನೆ ಮುಂದಕ್ಕೆ ನಡೆಯದಹಾಗೆ ನೋಡಿಕೊಳ್ಳಬೇಕು. ಮಾನ್ಯ ಸದಸ್ಯರ ಮೇಲೆ ನಾನು ಪ್ರಿವಿಲೇಜ್ ಇಸ್ಯೂ ಮೂವ್‌ಮಾಡುತ್ತೇನೆ. ತಾವು ಅನುಮತಿ ಕೊಡಬೇಕೆಂದು ಈ ಸಂದರ್ಭದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರುಶೇಖರ್.—ಈ ಸದನದಲ್ಲಿ ನಾವು ಯಾವ ರೀತಿ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ಒಂದು ಕಾನೂನು ಚೌಕಟ್ಟು ಇದೆ. ಆ ಕಾನೂನು ಚೌಕಟ್ಟಿನ ವ್ಯಾಪ್ತಿಯಲ್ಲಿ ಈ ಸಭೆಯ ಸದಸ್ಯರು ನಡೆದುಕೊಳ್ಳದೇ ಇದ್ದಾಗ, ಆ ಸದಸ್ಯರನ್ನು ಆ ಅವಧಿಯಲ್ಲಿ ಹೊರಕ್ಕೆ ಹಾಕತಕ್ಕಂಥಾದ್ದು ಇದೆ. ಮೊನ್ನೆ ನಾವು ಮಹಾರಾಷ್ಟ್ರ ಏಕೀಕರಣ ಸದಸ್ಯರ ನಡವಳಿಕೆಯ ಬಗ್ಗೆ ಅವರನ್ನು ಈ ಸದನದಿಂದ ಹೊರಕ್ಕೆ ಹಾಕಿದ್ದೇವೆ. ಅವರ ನಡವಳಿಕೆಗಿಂತ ಉಲ್ಬಣವಾದ ನಡವಳಿಕೆಯನ್ನು ಮಾನ್ಯ ಭೀಮಣ್ಣ ಖಂಡ್ರೆಯವರು ಒಂದು ಹೆಜ್ಜೆ ಮುಂದೆ ಹೋಗಿ ವ್ಯಕ್ತಪಡಿಸಿದ್ದಾರೆ. ಅಂದ ಮೇಲೆ ಕ್ಷಮೆ ಮಾಡತಕ್ಕ ಪರಿಸ್ಥಿತಿ ಇವತ್ತು ಇಲ್ಲ. ಈ ಅವಧಿಯಲ್ಲಿ ಅವರು ಈ ಸದನಕ್ಕೆ ಬರದಂತೆ ಆಜ್ಞೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಭೀಮಣ್ಣ ಖಂಡ್ರೆಯವರು ಹಿರಿಯ ಸದಸ್ಯರು ಒಂದು ಪ್ರಮುಖ ಪಾದಂತ ರಾಜಕೀಯ ಪಕ್ಷಕ್ಕೆ ಸೇರಿದವರು ಇಂಥ ಒಂದು ವರದಿಯನ್ನು ಬೆಂಕಿ ತೆಗೆದುಕೊಂಡು ಬಂದು ಸುಡುವಂತ ಕಾರ್ಯ ಏನು ಮಾಡಿದ್ದಾರೆ. ಅದು ನಿಜವಾಗಿಯೂ ಯಾರೂ ಕೂಡ ಸಹಿಸಲಿಕ್ಕೆ ಸಾಧ್ಯವಿಲ್ಲ. ಹೊಸ ಸದಸ್ಯರುಗಳುಏನಾದರೂ ಇಂಥ ಒಂದು ಕೃತ್ಯ ಮಾಡಿದ್ದರೆ ಅದು ಬೇರೆ ಮಾತು ಆಗುತಿತ್ತು. ಮಾನ್ಯ ಭೀಮಣ್ಣ ಖಂಡ್ರೆಯವರು ಇಂಥ ಕೃತ್ಯ ಮಾಡಿದ್ದಾರೆ ಎಂದರೆ ಇದು ಅಕ್ಷಮ್ಯ ಅಪರಾಧವಾಗುತ್ತದೆ. ಇವರ ವಿಚಾರದಲ್ಲಿ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ಒಂದು ಭಾವನೆಗಳು ಯಾವುದೇ ಪಟ್ಟದಲ್ಲಿರಲಿ ಅವುಗಳನ್ನು ಈ ಸದನದಲ್ಲಿ ಚರ್ಚೆ ಮೂಲಕ ತೆಗೆದುಕೊಳ್ಳುವುದು ಒಳ್ಳೆಯದು. ಈ ರೀತಿ ನಡೆದುಕೊಳ್ಳುವುದು ಸೂಕ್ತವಲ್ಲ. ತಾವು ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆನ್ನುವುದೇ ನನ್ನ ಅಭಿಪ್ರಾಯ.

ಶ್ರೀ ಜೆ. ಹೆಚ್. ಪಟೀಲ್.—ಇಲ್ಲಿ ಪ್ರಿವಿಲೇಜ್‌ಗಿಂತ ಮುಂಚೆ ಸಭ್ಯತೆ ಪ್ರಶ್ನೆ ಬರುತ್ತದೆ. ಇವರು ಮಾಡಿದ್ದು ಕೃತಿ. ಈ ಸದನದಲ್ಲಿ ಅವರು ಬೆಂಕಿ ಹಚ್ಚಲಿಕ್ಕೆ ಪ್ರಯತ್ನ ಮಾಡಿದ್ದು ಸರಿಯಲ್ಲ. ಕೃತಿ ಒಂದು ಕಡೆ. ಮಾತುಗಳನ್ನು ಹೇಳುವುದು ಒಂದು ಕಡೆ ಇರಬೇಕು. ಅವರು ಮಾಡಿದ್ದು ಕೃತಿ. ಇದನ್ನು ತೀರಾ ಎಕ್ಸ್‌ಟ್ರೀಮಾಗಿ ತೆಗೆದುಕೊಂಡು ಹೋಗಬಾರದೆಂದು ಹೇಳುತ್ತೇನೆ. ನನಗೆ ನೆನಪಿಗೆ ಬರುತ್ತದೆ. ಯುನೈಟೆಡ್ ಜನರಲ್ ಅಸೆಂಬ್ಲಿಯಲ್ಲಿ ತನ್ನ ಕೋಪವನ್ನು ವ್ಯಕ್ತಪಡಿಸುವ ಬಗ್ಗೆ ಕ್ರುಶ್ಚೇವ್ ಮಹಾನಾಯಕ ಚಪ್ಪಲಿ ತೆಗೆದು ಟೇಬಲ್ ಮೇಲೆ ಎಸೆದ. ನಾನು ಲೋಕ ಸಭೆಯಲ್ಲಿ ಕಣ್ಣಾರೆ ನೋಡಿದ್ದು. ಸ್ವಾಮಿ ರಮಾನಂದ ಎನ್ನುವವರು ಗೋಹತ್ಯೆ ಕಾನೂನಿನ ಬಗ್ಗೆ ಸರ್ಕಾರಕ್ಕೆ ಕೇಳಿ ಕೇಳಿ ಬೇಜಾರಾಗಿ ಸರ್ಕಾರ ಒಪ್ಪದೇ ಇದ್ದಾಗ ಹೋಂವಾಟರ್ ತಂದು ಮೈಗೆಲ್ಲಾ ಹಚ್ಚಿಕೊಂಡು ಕೂತುಕೊಂಡರು. ನಂತರ ಮಾರ್ಷಲ್‌ರವರು ಬಂದು ಅವರನ್ನು ಹೊರಗೆ ಹಾಕಿದರು. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಇಲ್ಲಿ ಕೂಡ ಮಾನ್ಯ ಗೋಪಾಲಗೌಡರು ರಾಜ್ಯಪಾಲರ ಭಾಷಣವನ್ನು ಹರಿದು ಹಾಕಿ ತುಳಿದಿದ್ದು ನಿಜ. ಕೆಲವೊಂದು ಸಂಧರ್ಭಗಳಲ್ಲಿ ಈ ರೀತಿ ಮಾಡುವಂಥ ಪರಿಸ್ಥಿತಿ ಬಂಧಿದೆ. ಯಾವ ಕಾರಣಕ್ಕೋಸ್ಕರ ಮಾಡುತ್ತಾರೆ. ಅದನ್ನು ಯೋಚನೆ ಮಾಡಬೇಕು. ಒಂದು ಪಕ್ಷ ಅವರು ಇಂಥ ಒಂದು ಕೆಲಸ ಮಾಡಬೇಕಾದರೆ ಶಿಕ್ಷೆ ಅನುಭವಿಸುವುದಕ್ಕೆ ಸಿದ್ಧವಾಗಿಯೇ ಮಾಡುತ್ತಾರೆ. ನಾನು ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ ಇದನ್ನು ತೀರಾ ಎಕ್ಸ್‌ಟ್ರೀಮಾಗಿ ತೆಗೆದುಕೊಂಡು ಹೋಗುವುದು ಬೇಡಿ.

ಮಾನ್ಯ ಸದಸ್ಯರು ಯಾವ ಕಾರಣಕ್ಕಾಗಿ ನಡೆದುಕೊಂಡರು ಎಂದರೆ ಮನಸ್ಸಿನ ಒಳಗೆ ಇರತಕ್ಕಂಥ ವಿಚಾರವನ್ನು ಬೆಂಕಿ ಹಚ್ಚಿ ತೋರಿಸುವುದರ ಮುಖಾಂತರ ತೋರ್ಪಡಿಸಿಕೊಂಡಿರುತ್ತಾರೆ. ಈ ವರ್ತನೆಯ ಬಗ್ಗೆ ಹೆಚ್ಚು ಜಗ್ಗಾಡುವುದರ ಬದಲು ಆದಷ್ಟು ಜಾಗ್ರತೆ ಮಾನ್ಯ ಸದಸ್ಯರು ತಮ್ಮ ವಿಷಾದವನ್ನು ವ್ಯಕ್ತಪಡಿಸುವುದಾದರೆ ವ್ಯಕ್ತಪಡಿಸಲಿ, ಇಲ್ಲದಿದ್ದರೆ ಸದನದ ಕಾನೂನು ಪ್ರಕಾರ ಏನು ಶಿಕ್ಷೆಯನ್ನು ಅವರಿಗೆ ಕೊಡುತ್ತೀರೋ ಆದಕ್ಕೆ ನಾವು ಮತ್ತು ನಮ್ಮ ಲೀಡರ್ ಸಂಪೂರ್ಣವಾಗಿ ಒಪ್ಪುತ್ತೇವೆ.

SRI BHEEMANNA KHANDRE.—I am prepared to face the consequences. I am ready to be hanged, for this. I am not going to withdraw what I have said.

(Shouting slogans like 'Murdabad' the hon. Member Sri Bheemanna Khandre staged a walk out)

Motion to Suspend a Member

MR. SPEAKER.—In my opinion the conduct of the hon. Member is grossly disorderly. Now he has withdrawn from the house. However, according to Rule 309, Sri Bheemanna Khandre be named.

SRI B. BASAVALINGAPPA (Revenue Minister).—Sir, I beg to move:

"That Shri Bheemanna Khandre be suspended from the service of the Assembly till the remainder of the current session".

The Question was proposed.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮಾತನಾಡುವಾಗ ನನ್ನ ಶಬ್ದಗಳಲ್ಲಿ ತೀವ್ರವಾಗಿ ಸ್ಪಷ್ಟವಾಗಿ ಹೇಳಿದ್ದೇನೆ. ಈ ವರ್ತನೆಗೆ ಸಮರ್ಥನೆ ಮಾಡುವುದಿಲ್ಲ. ಸಮರ್ಥನೆ ಮಾಡುವುದಕ್ಕೆ ಶಕ್ಯವೂ ಇಲ್ಲವೆಂದು ಹೇಳುತ್ತೇನೆ. ಮಾನ್ಯ ಸದಸ್ಯರ ವರ್ತನೆ ಸರಿಯಾದುದಲ್ಲ, ತಪ್ಪು ಮಾಡಿರುತ್ತಾರೆ. ಏನು ಶಿಕ್ಷೆಯನ್ನು ಕೊಡುತ್ತೀರೋ ಅದನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಯಾವುದೇ ವಿಚಾರಗಳನ್ನು ಹೇಳುವಾಗ ಆವೇಶದಲ್ಲಿ ಹೇಳಿದ್ದರೆ ಅದರ ಬಗ್ಗೆ ಈ ಮನೆಯ ಕ್ಷಮೆಯನ್ನು ಕೇಳಿದ್ದರೆ, ಕ್ಷಮೆಯನ್ನು ಕೊಡತಕ್ಕಂಥ ದೊಡ್ಡ ಗುಣ ಈ ಮನೆಗೆ ಇರುತ್ತದೆ. ಅವರು ಆ ರೀತಿ ಕ್ಷಮೆಯನ್ನು ಕೇಳಲಿಲ್ಲ. ನನ್ನ ಸಲಹೆಯಾದರೂ ಏನು ಎಂದರೆ ಶ್ರೀಮಾನ್ ಜಿ. ಎಚ್. ಪಟೇಲರು ಹೇಳಿದ ಹಾಗೆ ಸಮರ್ಥನೆ ಮಾಡಿಕೊಳ್ಳುತ್ತೇನೆ. ಈ ಮನೆಯ ಗೌರವವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ತಮ್ಮ ಕಾನೂನಿನ ಕ್ಷೇತ್ರದಲ್ಲಿ ಬರತಕ್ಕಂಥ ಶಿಕ್ಷೆಯನ್ನು ಕೊಟ್ಟರೂ ಅದಕ್ಕೆ ನಮ್ಮ ಸಮರ್ಥನೆ ಇದೆ ಎಂದು ಹೇಳುತ್ತೇನೆ

MR. SPEAKER.—The question is:

"That Sri Bheemanna Khandre be suspended from the service of the Assembly till the remainder of the current Session".

The Motion was Adopted and the hon. Member was suspe ded till the remainder of the current Session.

CALLING ATTENTION TO MATTERS OF URGENT PUBLIC IMPORTANCE :

re : Neglect of Certain Communities in the matter of Employment and Educational opportunities (Continued).

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೆ ಕಾಲಿಂಗ್ ಅಟೆನ್‌ಷನ್ ಮೇಲೆ ಮಾನ್ಯ ಮಂತ್ರಿಯವರನ್ನು ೨-೩ ವಿವರಗಳನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಒಂದನೆಯದಾಗಿ ತಾವು ಏನು ಒಂದು ಶೇಕಡಾವಾರು ಕೊಟ್ಟಿರುತ್ತೀರಿ, ಅದರಂತೆ ಬೇರೆ ಬೇರೆ ಕಾಲೇಜುಗಳಲ್ಲಿ ಸೀಟು ಕೊಡ ಬೇಕಾದರೆ ಮತ್ತು ಸ್ಕಾಲರ್‌ಷಿಪ್ ಕೊಡಬೇಕಾದರೆ, ಫೀಸ್ ಕನ್‌ಸೆಷನ್ ಕೊಡಬೇಕಾದರೆ ತಾವು ಏನು ಒಂದು ಕೋಟ ಇಟ್ಟಿರುತ್ತೀರಿ, ಅದನ್ನು ಶಾಲಾ ಕಾಲೇಜುಗಳಲ್ಲಿ ಫಾಲೋ ಮಾಡಾತ್ತಿರುತ್ತಾರೆ. ಇದ ರಿಂದ ಒಂದು ರೀತಿಯಾದ ದುಷ್ಪರಿಣಾಮವಾಗುತ್ತಿದೆ ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಏನು ದುಷ್ಪರಿಣಾಮವೆಂದರೆ ಕಾಲೇಜ್ ಅಡ್ಮಿಷನ್ ತೆಗೆದುಕೊಳ್ಳುವಾಗ ಇಷ್ಟು ಪರ್ಸೆಂಟ್ ಎಂದು ಕೋಟ ಇಟ್ಟಿರುತ್ತೀರಿ. ಅಡ್ವಾನ್ಸ್ ಕಮ್ಯುನಿಟಿಗೆ ೪೨ ಪರ್ಸೆಂಟ್ ಇಟ್ಟಿದ್ದರೆ ಉಳಿದವರಿಗೆ ೫೨ ಪರ್ಸೆಂಟ್ ಇಟ್ಟಿರುತ್ತೀರಿ. ಈಗ ಒಬ್ಬ ಬ್ರಾಹ್ಮಣರ ಜಾತಿಗೆ ಸೇರಿದಂಥ ವಿದ್ಯಾರ್ಥಿ, ಲಿಂಗಾಯತರ ಜಾತಿಗೆ ಸೇರಿದಂಥ ವಿದ್ಯಾರ್ಥಿ ೭೫-೮೦ ಪರ್ಸೆಂಟ್ ನಂಬರುಗಳನ್ನು ತೆಗೆದುಕೊಂಡಿದ್ದರೂ ಸಹ ಅವರು ಜನರಲ್ ಪೂಲ್‌ನಲ್ಲಿ ಬರುತ್ತಾರೆ. ಆದ್ದರಿಂದ ಅಡ್ವಾನ್ಸ್ ಕಮ್ಯುನಿಟಿಗೆ ಸೀಟು ಸಿಗುವುದಿಲ್ಲ. ಆದರೆ ಅದೇ ಬ್ಯಾಕ್‌ವರ್ಡ್ ಕಮ್ಯುನಿಟಿಯಲ್ಲಿ ಬರುವ ವಿದ್ಯಾರ್ಥಿಗಳಿಗೆ ೨೨ ಪರ್ಸೆಂಟ್ ಬಂದರೂ ರಿಸರ್ವೇಶನ್ ಇಟ್ಟಿರುತ್ತೀರಿ. ಅವರಿಗೆ ೪೦-೪೫ ಪರ್ಸೆಂಟ್ ಬಂದರೂ ಕೂಡ ಸೀಟು ಸಿಗುತ್ತದೆ. ಇದು ಯಾವ ನ್ಯಾಯವೆಂದು ಕೇಳುತ್ತೇನೆ. ೭೫ ಪರ್ಸೆಂಟ್ ಬಂದಿದ್ದರೂ ಕೂಡ ಬ್ರಾಹ್ಮಣರ ಜಾತಿಯಲ್ಲಾಗಲಿ, ಲಿಂಗಾಯತರ ಜಾತಿಯಲ್ಲಾಗಲಿ ಹುಟ್ಟಿದ್ದರೆ ಆ ವಿದ್ಯಾರ್ಥಿಗೆ ಸೀಟು ಸಿಗುವುದಿಲ್ಲ.

ಎರಡನೆಯದಾಗಿ ಕನ್‌ಸೆಷನ್ ಕೊಡುವ ಬಗ್ಗೆ ಅದರಲ್ಲೂ ಕೂಡ ಬಹಳ ದೊಡ್ಡ ಅನ್ಯಾಯವಾಗು ತ್ತಿದೆ. ವಿದ್ಯಾರ್ಥಿಗಳಿಗೆ ಅಡ್ವಾನ್ಸ್ ಕಮ್ಯುನಿಟಿಗೆ ೪೮೦೦ ರೂಪಾಯಿಗಳು ಆದಕ್ಕೆ ಮೇಲ್‌ಪಟ್ಟು ಆದಾಯ ಬರತಕ್ಕಂಥವರಿಗೆ ಫೀಸ್ ಕನ್‌ಸೆಷನ್ ಕೊಟ್ಟಿದ್ದೀರಿ. ಬೇರೆ ಕಮ್ಯುನಿಟಿಯವರಿಗೆ ೧೦ ಸಾವಿರ ರೂಪಾಯಿಗಳ ಒಳಗಿದ್ದರೆ ಕನ್‌ಸೆಷನ್ ಕೊಡುತ್ತೀರಿ. ಆದರೆ ಅದೇ ಬ್ರಾಹ್ಮಣರ ಮತ್ತು

ಲಿಂಗಾಯತರ ಜಾತಿಯಲ್ಲಿ ಹುಟ್ಟಿದ್ದು ಅವರು ಜೀವನ ಮಾಡಲಿಕ್ಕೂ ತೊಂದರೆ ಇದ್ದರೂ ಕೂಡ ಅವರ ಆದಾಯ ೪೮೦೦ ರೂಪಾಯಿ ಇದ್ದರೂ ಅಂಥ ವಿದ್ಯಾರ್ಥಿಗಳಿಗೆ ಫೀಸ್ ಕನ್‌ಸೆಷನ್ ಕೊಡುವುದಿಲ್ಲ.

ಅಧ್ಯಕ್ಷರು.— ದಯವಿಟ್ಟು ಸ್ಪಷ್ಟೀಕರಣ ಕೇಳಿ,

ಶ್ರೀ ಮಳ್ಳೂರ್ ಆನಂದರಾವ್.—ನಾನು ಭಾಷಣ ಮಾಡುತ್ತಾ ಇಲ್ಲ. ಉದಾಹರಣೆಯನ್ನು ಕೊಡುತ್ತಿರುತ್ತೇನೆ. ಆದರೆ ೧೦ ಸಾವಿರ ರೂಪಾಯಿ ಒಳಗೆ ಬರತಕ್ಕಂಥ ಒಕ್ಕಲಿಗ ವಿದ್ಯಾರ್ಥಿಗಳಿಗೂ ಕೂಡ ಇದೇ ತೊಂದರೆ ಇರುತ್ತದೆ ಇದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು. ಬ್ರಾಹ್ಮಣರ ಜಾತಿಯಲ್ಲಿ ವಿದ್ಯಾರ್ಥಿಗಳು ಹುಟ್ಟಿದ್ದೇ ತಪ್ಪೇ ಎಂದು ಕೇಳುತ್ತೇನೆ.

ಮೂರನೆಯದಾಗಿ ಪೆನ್‌ಷನರ್ ಬಗ್ಗೆ ಇತ್ತೀಚೆಗೆ ಒಂದು ಆರ್ಡರ್‌ನ್ನು ಹೊರಡಿಸಿರುತ್ತೀರಿ. ೪,೮೦೦ ರೂಪಾಯಿ ಆದಾಯ ಬರತಕ್ಕಂಥವರು ಎಂದು ಏನು ಮಿತಿ ಇಟ್ಟಿರುತ್ತೀರಿ, ಸಾಮಾನ್ಯವಾಗಿ ಪೆನೆಷನ್ ತೆಗೆದುಕೊಳ್ಳುವವರ ಆರ್ಥಿಕ ಸ್ಥಿತಿ ಏನು ಎಂಬುದು ತಿಳಿದೇ ಇರುತ್ತದೆ. ಅವರ ಮಕ್ಕಳಿಗೆ ಕಾಲೇಜ್‌ನಲ್ಲಿ ಕನ್‌ಸೆಷನ್ ಕೊಡದಿದ್ದರೆ ಅವರ ಗತಿ ಏನಾಗುತ್ತದೆ? ಇದಕ್ಕೆಲ್ಲ ವಿವರಣೆ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಇದು ರೇಡಿಯೋದಲ್ಲಿ ವಿಫುಲವಾದ ಪ್ರಚಾರ ಆಯಿತು. ನನಗೆ ಇದರ ಬಗ್ಗೆ ಕ್ಲಾರಿಫಿಕೇಶನ್ ಕೊಡಿ. ೧೦ ಸಾವಿರ ರೂಪಾಯಿ ವರಮಾನ ಬರತಕ್ಕಂಥಾ ಎಲ್ಲಾ ವಿದ್ಯಾರ್ಥಿಗಳಿಗೂ ಕರ್ನಾಟಕದ ಎಲ್ಲಾ ಶಾಲಾಕಾಲೇಜುಗಳಲ್ಲಿ ಸ್ಕಾಲರ್‌ಷಿಪ್ ಕೊಡುತ್ತೇವೆ ಅನ್ನುವ ವಿಷಯ ರೇಡಿಯೋದಲ್ಲಿ ಪ್ರಚಾರ ವಾಯಿತು. ಈ ರೀತಿಯಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದು ನಿಜವೇ? ಇದರ ಬಗ್ಗೆ ನಾನು ತಮ್ಮಿಂದ ಉತ್ತರವನ್ನು ತಿಳಿಯಬಯಸುತ್ತೇನೆ,

